OS 25/2022
DW-1

ದಿನಾಂಕಃ 15-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನ್ನ ತಾತ ನಾಗೇಂದ್ರಪ್ಪ ನವರಿಗೆ ಮಂಜುನಾಥ , ಶಿವಲಿಂಗಪ್ಪ , ನಾಗರತ್ನಮ್ಮ ಎನ್ನುವ ಮೂರು ಜನ ಮಕ್ಕಳು. ನನ್ನ ತಂದೆ ಮಂಜುನಾಥ ರವರಿಗೆ ಬಸವರಾಜಪ್ಪ ಎಂದೂ ಸಹ ಕರೆಯುತ್ತಿದ್ದರು ಎಂದರೆ ಸರಿ. ಈ ದಾವೆಯ 1ನೇ ವಾದಿ ಅವರ ತಂದೆಯಾದ ನಾಗೇಂದ್ರಪ್ಪ , ತಾಯಿ ಪಾರ್ವತಮ್ಮ ಮತ್ತು ಅವರ ಅಣ್ಣನಾದ ನನ್ನ ತಂದೆ ಮತ್ತು ನನ್ನ ತಾಯಿಯಾದ ಗಂಗಮ್ಮ ರವರ ವಿರುದ್ದ ಮತ್ತು ಮೈನರ್ ಆದ ನನ್ನ ವಿರುದ್ದ ಮತ್ತು ನನ್ನ ಅತ್ತೆಯಾದ ರತ್ನಮ್ಮ ರವರ ವಿರುದ್ದ ಓ ಎಸ್ 262/2008 ರಂತೆ ಪಾಲು ವಿಭಾಗಕ್ಕಾಗಿ ಪ್ರಧಾನ ಸಿವಿಲ್ ನ್ಯಾಯಾಲಯ ಚನ್ನಗಿರಿಯಲ್ಲಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಂದೆಯಾದ ಬಸವರಾಜಪ್ಪ ಅಲಿಯಾಸ್ ಮಂಜುನಾಥ , ಮತ್ತು ನನ್ನ ತಾಯಿ ಮತ್ತು ನನಗೆ ಜಂಟಿಯಾಗಿ ಸರ್ವೆ ನಂಬರ್ 52/ಪಿ2 ರಲ್ಲಿ 38 ½ ಗುಂಟೆ ಜಮೀನಿನಲ್ಲಿ ದಕ್ಷಿಣ ಭಾಗದ 19 ಗುಂಟೆ ಜಮೀನು ನಮ್ಮ ಹಿಸ್ಸೆಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಂತೆ ಸರ್ವೆ ನಂಬರ್19/2 ರಲ್ಲಿನ 2 ಎಕರೆ ಜಮೀನಿನಲ್ಲಿ 27 ಗುಂಟೆ ಜಮೀನು ನಮ್ಮ ಹಿಸ್ಸೆಗೆ ಬಂದಿತ್ತು ಎಂದರೆ ಗೊತ್ತಿಲ್ಲ. ಅದೇ ರೀತಿ ಖಾತೆ ನಂಬರ್ 89/116 ರಲ್ಲಿ ಒಟ್ಟು ಮೂರು ಅಂಕಣದ ಕರೆ ಹಂಚಿನ ಮನೆಯಲ್ಲಿ 1 ಅಂಕಣದ ಮನೆ ಜಂಟಿಯಾಗಿ ನಮ್ಮ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ವಾದಿ ನಮ್ಮ ವಿರುದ್ದ ಸುಳ್ಳು ಡಿಕ್ರಿ ಪಡೆದಿರುವ ವಿಚಾರವಾಗಿ ಹೂಡಿರುತ್ತಾರೆ. ನನಗೆ ಈಗ 25 ವರ್ಷ ವಯಸ್ಸಾಗಿದೆ. ನನ್ನ ಜನ್ಮ ದಿನಾಂಕದ ಪರಿಶೀಲನೆಗಾಗಿ ನಾನು ಶಾಲಾ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ ತಮ್ಮ ಪರವಾಗಿ ನಿಶಾನೆಗೂಳಪಟ್ಟ ದಾಖಲೆಗಳನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿ ತಾನು ಹೇಳಿದಂತೆ ಜನ್ಮ ದಿನಾಂಕ ವನ್ನು ತೋರಿಸುವ ದಾಖಲೆ ಇಲ್ಲ ಎಂದು ಖಚಿತಪಡಿಸಿಕೊಂಡಿರುತ್ತಾರೆ. ಸದರಿ ನಿಪಿ.1 ರಂತೆ 1 ಮತ್ತು 2ನೇ ವಾದಿ ಮತ್ತು 1ನೇ ವಾದಿಯ ತಂದೆಯಾದ ನಾಗೇಂದ್ರಪ್ಪ ನಿಗೆ ಸರ್ವೆ ನಂಬರ್ 52/ಪಿ2 ನಲ್ಲಿ , 32 ½ ಗುಂಟೆ ಪೈಕಿ ಉತ್ತರದ 19 ಗುಂಟೆ ಜಮೀನು ಹಂಚಿಕೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಅದೇ ರೀತಿ 19/2 ರಲ್ಲಿನ 2 ಎಕರೆ ಪೈಕಿ ಪೂರ್ವ ಭಾಗದ 1 ಎಕರೆ 13 ಗಂಟೆ ಜಮೀನು ಹಂಚಿಕೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಖಾತೆ ಸಂಖ್ಯೆ 89/116 ರಲ್ಲಿ ಮೂರು ಅಂಕಣದ ಕರೆ ಹಂಚಿನ ಮನೆಯ ಪೈಕಿ ಪೂರ್ವ ಭಾಗದ ಎರಡು ಅಂಕಣದ ಮನೆ ಹಂಚಿಕೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ನನ್ನ ವಿವಾಹಕ್ಕೂ ಪೂರ್ವ ನನ್ನ ತಾಯಿ ತಂದೆಯ ಜೊತೆ ವಾಸವಿದ್ದೆ. ನನ್ನ ವಿವಾಹ 2018 ರಲ್ಲಿ ಆಗಿರುತ್ತದೆ. ನನ್ನ ತಂದೆ 2019 ರಲ್ಲಿ ಮೃತಪಟ್ಟಿರುತ್ತಾರೆ. ಸದರಿ ಸಮಯಕ್ಕೆ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಹಾಗಾಗಿ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳ ಬಗ್ಗೆ 1 ನೇ ಪ್ರತಿವಾದಿಯಾದ ನನ್ನ ತಾಯಿಗೆ ಗೊತ್ತಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾವು ಪ್ರಸ್ತುತ ಯಾವ ಆಸ್ತಿಗಳಲ್ಲಿ ಸ್ವಾಧೀನ ಇದ್ದೇವೆ ಎಂದರೆ ಸಾಕ್ಷಿ ಸ್ವಾಧೀನ ಬಿಟ್ಟುಕೊಟ್ಟರೆ ತಾನೇ ಅನುಭವಿಸಲು ಸಾಧ್ಯ ಎಂದು ನುಡಿಯುತ್ತಾರೆ ಮುಂದುವರೆದು ವಾದಿ ತಪ್ಪು ದಾಖಲೆಗಳನ್ನು ಸೃಷ್ಟಿಸಿ ಎಲ್ಲಾ ಆಸ್ತಿಗಳಲ್ಲೂ ಸಹ ಅವರೇ ಅನುಭವದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ನಿಪಿ.1ರ ಎಲ್ಲಾ ಮಾಹಿತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ದಾವೆಯ ವಿಚಾರವಾಗಿ ಈ ಹಿಂದೆ ನಡೆದ ನಿಪಿ.1ರ ವಿಚಾರವಾಗಲೀ ಗೊತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯನ್ನು ಈ ನ್ಯಾಯಾಲಯದಲ್ಲಿ ಸಾಕ್ಷಿ ಮಾಡಿಸಲು ನನಗೆ ಯಾವುದೇ ರೀತಿಯ ತೊಂದರೆ ಇಲ್ಲ . ನನ್ನ ತಾಯಿಯವರು ಸಹಿ ಮತ್ತು ಹೆಬ್ಬೆಟ್ಟು ಎರಡನ್ನೂ ಸಹ ಹಾಕುತ್ತಾರೆ. ನಾನು ಬಿಬಿಎಂ ಪಧವೀದರೆ. ನನ್ನ ತಾಯಿಯ ಸಹಿ ಕುರಿತು ಅವರೇ ಹೇಳಬೇಕು. ನನಗೆ ಗೊತ್ತಿಲ್ಲ. ನನ್ನ ತಂದೆಯ ಸಹಿ ನಿಪಿ.7 ರಲ್ಲಿ ಇಲ್ಲ.

ನನ್ನ ಅತ್ತೆಯಾದ ರತ್ನಮ್ಮರವರು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ 35/2022 ರಂತೆ ಸರ್ವೆ ನಂಬರ್ 6/6ಎ ರಲ್ಲಿನ 5 ಗುಂಟೆ ಜಮೀನಿನ ವಿಚಾರವಾಗಿ ಪಾಲು ವಿಭಾಗಕ್ಕಾಗಿ ನಿಪಿ.15 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯನ್ನು ನಿಪಿ.1 ರಲ್ಲಿ ಸದರಿ 5 ಗುಂಟೆ ಆಸ್ತಿಯನ್ನು ಸೇರಿಸದ ಕಾರಣ ಸದರಿ ಜಮೀನಿನಲ್ಲಿ ತನಗೆ ಭಾಗ ಬೇಕು ಎಂದು ದಾವೆ ಹೂಡಿದ್ದರು ಎಂದರೆ ಸರಿ.

ಸಾಕ್ಷಿಗೆ ಈಗ ನಿಪಿ.19 ನ್ನು ತೋರಿಸಲಾಗಿ ಸದರಿ 19 ರಲ್ಲಿನ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ನಿಪಿ.19ರ ಐದು ಹಾಳೆಗಳಲ್ಲಿ ಇರುವ ಸಹಿ ನನ್ನದೇ ಎಂದು ಸಾಕ್ಷಿ ಗುರುತಿಸಿ ಒಪ್ಪಿದ ಮೇರೆಗೆ ಸದರಿ ನಿಪಿ.19ರ ಐದನೇ ಪುಟದಲ್ಲಿನ ಸಾಕ್ಷಿಯ ಸಹಿಯನ್ನು 19(ಎ) ಎಂದು ನಿಶಾನೆಗೊಳಿಸಲಾಯಿತು. ಸದರಿ ನಿಪಿ.19ರ ತಕರಾರನ್ನು ನಾನೇ ನಮ್ಮ ವಕೀಲರ ಮುಖಾಂತರ ಬರೆಸಿರುತ್ತೇನೆ. ಸದರಿ ತಕರಾರಿನಲ್ಲಿ ನಿಪಿ.1 ರಂತೆ ಈಗಾಗಲೇ ಪಾಲು ವಿಭಾಗ ಆಗಿರುವ ಕಾರಣ ಸದರಿ ಐದು ಗುಂಟೆ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ನಿಪಿ.19 ರಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. ನಾನು ನಿಪಿ.19ರ ದಾವೆಯಲ್ಲಿನ ತಕರಾರಿನಲ್ಲಿ ನಿಪಿ.1 ನ್ನು ಒಪ್ಪಿದು ಈ ದಾವೆಯಲ್ಲಿ ನಿಪಿ.1ರ ನೈಜತೆಯ ಬಗ್ಗೆ ಯಾವ ಕಾರಣದಿಂದ ತಕರಾರು ತೆಗೆಯುತ್ತಿದ್ದೇನೆ ಎಂದರೆ ಸಾಕ್ಷಿ ಎರಡು ಎಕರೆ ಜಮೀನು ಸ್ವಯಾರ್ಜಿತ ಆಸ್ತಿಯಾಗಿದೆ ಎಂದು ನುಡಿಯುತ್ತಾರೆ. ನಮ್ಮ ವಕೀಲರು ನನ್ನ ಅತ್ತೆಯಾದ ರತ್ನಮ್ಮನವರಿಗೆ ಪಾಟೀ ಸವಾಲು ಮಾಡಿರುತ್ತಾರೆ ಎಂದರೆ ಸರಿ. ಸದರಿ ನಿಪಿ.19ರ ದಾವೆಯಲ್ಲಿ ನಮ್ಮ ವಕೀಲರು ಸದರಿ ರತ್ನಮ್ಮ ನವರಿಗೆ ನಿಡಿ.1 ರಂತೆ ನಿಶಾನೆಗೊಳಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈಗ ಸದರಿ ದಾಖಲೆಯ ನಿಡಿ.1 ನ್ನು ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿ ಒಪ್ಪಿದ ಮೇರೆಗೆ ಅದನ್ನು ನಿಪಿ.20 ಎಂದು ನಿಶಾನೆಗೊಳಿಸಲಾಯಿತು.

(ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.